ಇರುತ್ತದೆ ಎಂಬುದು ಅವಳ ಕಲ್ಪನೆಯಲ್ಲಿ ಕೂಡ ಇರಲಿಲ್ಲ. ಸಾಕಷ್ಟು ಹೊತ್ತು ಮೌನವಾಗಿಯೇ ಕುಳಿತಿದ್ದಳು. 'ಮಹಾರಾಣಿ... ನನಗೆ ಅದೆಲ್ಲ ತಿಳಿಯದು. ಅರ್ಥವೂ ಆಗುವುದಿಲ್ಲ. ಮತ್ತು... ಹಂ ಉಸ್ ತರಹ್ ನೈ ಜೀನ. ನಾನು ಹೊರಡುತ್ತೇನೆ' ತೊದಲಿದಳು.

ರಾಣಿ ಮೃದುವಾಗಿ ಹೇಳಿದಳು: 'ಅಂಜು, ನಿನ್ನನ್ನು ಹೆದರಿಸುತ್ತಿಲ್ಲ ನಾನು. ರಾಜ ವೈಭವವನ್ನು ಹೊರಗಿನಿಂದ ಮಾತ್ರ ನೋಡಿ ಆನಂದಿಸುತ್ತೀರಿ ನೀವು. ಆದರೆ ಇಲ್ಲಿ ಇಂಚು ಇಂಚಿನಲ್ಲೂ ತ್ಯಾಗ, ಬಲಿದಾನದ ಕತೆಗಳಿರುತ್ತವೆ. ಪ್ರೀತಿಯ ಅಮಲಿನಲ್ಲಿ ರಾಜಗೌರವ ಮತ್ತು ರಾಜ್ಯದ ಪ್ರಜೆಗಳು ಮಣ್ಣಾಗಲು ನಾವು ಬಿಡುವುದಿಲ್ಲ. ಇದೇ ಮಾತನ್ನು ನಾವು ರಾಜಕುವರನಿಗೂ ತಿಳಿಸುತ್ತೇವೆ. ಒಂದುವೇಳೆ ಅವರು ಒಪ್ಪದಿದ್ದರೆ ನಾವು ರಾಜ್ಯಕ್ಕೆ ಬೇರೆ ವಾರಸುದಾರರನ್ನು ಹುಡುಕಬೇಕಾಗುತ್ತದೆ. ಇದು ಇಲ್ಲಿಯ ರೀತಿ. ರಿವಾಜು. ನಾವು ರಾಜಮನೆತನದಲ್ಲಿ ಹೆಣ್ಣು ಹುಡುಕುವಾಗ ರಾಜ್ಯ ಆಳುವ, ಕಟ್ಟುವ ಎದೆಗಾರಿಕೆ ಇರುವ ಹೆಣ್ಣನ್ನು ಹುಡುಕುತ್ತೇವೆ. ನಿಮ್ಮಲ್ಲಿ ಹೆಣ್ಣು ಹುಡುಕುವಾಗ ಮನೆ ಕೆಲಸಗಳನ್ನು ಕಲಿತಿದ್ದಾಳಾ ಎಂದು ತಿಳಿದು ಹುಡುಕುತ್ತೀರಿ. ನಿಮ್ಮ ಕಲಿಕೆ ಮತ್ತು ನಮ್ಮ ಕಲಿಕೆಗಳ ನಡುವೆ ಸಾಕಷ್ಟು ವ್ಯತ್ಯಾಸವಾಗಿರುತ್ತವೆ. ...ಆದರೂ ಕೂಡ, ನಿನಗೆ ನಾನು ಅವಕಾಶ ಕೊಡುತ್ತೇನೆ. ಕಲಿಸುತ್ತೇನೆ. ಕಲಿಯುವ ಎದೆಗಾರಿಕೆ ಇದ್ದರೆ ಹೇಳು.'

ಈಗ ಅಂಜು ದೃಢವಾಗಿ ನುಡಿದಳು: 'ಇಲ್ಲ, ಮಹಾರಾಣಿ... ಇದು ನನ್ನಿಂದ ದೂರ. ರಾಜಕುಮಾರ ರಾಜನಾಗೇ ಇರಲಿ. ಇಲ್ಲೇ ಇರಲಿ. ಅವರಿಗೆ ಎಂದೂ ನಾನು ಒಳಿತನ್ನೇ ಬಯಸುತ್ತೇನೆ...' ತನ್ನ ಕೈಯಲ್ಲಿದ್ದ ಬೆಳ್ಳಿ ಕಡಗ ಹೊರ ತೆಗೆದಳು... ಅದನ್ನು ರಾಣಿಯ ಪಾದದ ಬಳಿ ಇರಿಸಿದಳು... 'ಒಡತಿ... ಇದನ್ನು ಒಪ್ಪಿಸಿಕೊಳ್ಳಿ. ತಮ್ಮ ಕುಮಾರನಿಗೆ ಕೊಟ್ಟುಬಿಡಿ. ಎಲ್ಲಿದ್ದರೂ ಅವರ ಶ್ರೇಯಸ್ಸನ್ನು ಬಯಸುತ್ತೇನೆ. ನಮ್ಮಂಥ ಸಾವಿರಾರು ಜನರಿಗೆ ಜೀವ, ಜೀವನ ನೀಡುವ ಅವರ ಕಾಯಕ ಮುಂದುವರಿಯಲಿ. ನಾನು ನಿಮ್ಮ ಪ್ರಜೆಯಾಗಿ ಮಾತ್ರ ಇರುತ್ತೇನೆ.' ಹಾಗೆ ಇರಿಸಿ ಏಳುವಾಗ ಅವಳ ಕಣ್ಣಂಚಿನ ಕಂಬನಿಯೊಂದು ಅದರ ಮೇಲೆ ಬಿದ್ದಿತು. ಅದನ್ನು ತೆಗೆದುಕೊಂಡ ರಾಣಿಯ ಕಣ್ಣಿಂದಲೂ ಕಂಬನಿಯ ಹನಿಯೊಂದು ಅದರ ಪಕ್ಕದಲ್ಲೇ ಬಿದ್ದಿತು.

ತಿರುಗಿ ನೋಡದೆ ಹೊರಬಂದಳು ಅಂಜು. ಕಾಯುತ್ತಿದ್ದ ತಂದೆಗೆ ಹೇಳಿದಳು: 'ಅಪ್ಪ... ಹೊರಡೋಣ.' ಅವಳು ಬಂದು ಹೋದ ಮರುದಿನವೇ ರಾಜಕುವರ ಅರಮನೆಗೆ ಬಂದಿದ್ದ. ಅಂದು ರಾತ್ರಿ ಮಹಡಿಯ ಮೇಲೆ ನಿಂತಿದ್ದವನಿಗೆ ಅಂಜುವಿನ ಗುಡಾರದ ಬಳಿ ಅವಳ ವಿವಾಹದ ಕೇಕೆ ಸದ್ದುಗಳು, ನಗಾರಿ ಸದ್ದುಗಳು. ಭಾಜಾ ಭಜಂತ್ರಿಗಳು ಜೋರಾಗಿ ಕೇಳಿಸುತ್ತಿದ್ದವು. ಎಲ್ಲರೂ ಗುಂಪಾಗಿ ಏರು ಧ್ವನಿಯಲ್ಲಿ ಹಾಡುತ್ತಿದ್ದರು 'ಲಕ್ ಚಿಪ್ ನ ಜಾವೋಜೀ, ಮನ್ನೆ ಡೀಡ್ ಕರಾವೋಜಿ...' ರಾಜ ಕುವರನ ಕೈಯಲ್ಲಿ ಹಳದಿ ಕರವಸ್ತ್ರ ಮತ್ತು ಬೆಳ್ಳೀ ಕಡಗ ಎರಡೂ ಇದ್ದವು. ಕರವಸ್ತ್ರ ಪೂರ್ತಿ ಒದ್ದೆಯಾಗಿತ್ತು.

ಗಲ್ಲದ ಮೇಲೆ ಕೈಯಿಟ್ಟು ತನ್ನ ವಿವಾಹವನ್ನು ನೆನೆದ ಅಂಜು ನಿಟ್ಟುಸಿರಿಟ್ಟಳು. ಮನಸ್ಸು ಎಷ್ಟು ಬೇಗ ಭಾವನೆಗಳ ಒಂಟೆಯ ಮೇಲೆ ಸವಾರಿ ಮಾಡಿಬಿಡುತ್ತಲ್ಲ! ಆದರೆ ವಿಶೇಷ ಎಂದರೆ ತಾನು ವಿವಾಹವಾದಕೂಡಲೇ ಗರ್ಭ ಧರಿಸಿದ್ದು. ಅಥವಾ ಗರ್ಭ ಧರಿಸಿಯೇ ವಿವಾಹವಾದೆನೋ!! ಅಂಜುವಿನ ಮನಸ್ಸು ಕುಣಿಯ ತೊಡಗಿತು. ಅಭಿ ಯಾಕೆ ನನಗೆ ರಾಜಕುವರನಂತೆ ಕಾಣುತ್ತಾನೆ? ತಂದೆಯ ಲಕ್ಷಣಗಳೇ ಇಲ್ಲವಲ್ಲ ಅವನಲ್ಲಿ! ಅಷ್ಟರಲ್ಲಿ ಎರಡು ಒಂಟೆಗಳ ಹೇಶಾರವ. ಅಂಜು ತಲೆ ಎತ್ತಿ ನೋಡಿದಳು. ತಂದೆ ಮತ್ತು ಮಗ ಎರಡು ಒಂಟೆಗಳ ಮೇಲೆ. ಅಂಜು ತಕ್ಷಣ ಎದ್ದಳು. ಓಡ್ನಿಯನ್ನು ಮುಖದ ಮೇಲೆ ಎಳೆದುಕೊಂಡಳು... ಒಂಟೆಯಿಂದ ಇಳಿದ. ತಂದೆ ಹೇಳಿದ: 'ಏಯ್, ಅಂಜು... ನೋಡು ನನ್ನ ಮಗನ ನಸೀಬು... ಇನ್ನು ಮೇಲೆ ನಾವು ಇಲ್ಲೇ ಇರೋದು. ನನ್ನ ಮಗ